# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ಸೊಲೊಮೋನನು ಜ್ಞಾನಿಯಾದ ಅರಸನು


ಬರಹಗಾರರು: Edward Hughes
ಚಿತ್ರಲೇಖಕರು: Lazarus
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Ruth Klassen



60ರ 22ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*



ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ

Kannada

ಅರಸನಾದ ದಾವೀದನು ತನ್ನ ಆಳ್ವಿಕೆಯಲ್ಲಿ ಒಳ್ಳೆಯ ದೇವರ ಮನುಷ್ಯನಾಗಿದ್ದನು. ಇಸ್ರಾಯೇಲ್ಯರು ದಾವೀದನ ಕಾಲದಲ್ಲಿ ಸೌಲನ ಕಾಲಕ್ಕಿಂತಲೂ ಹತ್ತು ಪಟ್ಟು ಬಲಿಷ್ಟರಾದರು.



1

ಆದರೆ ಆತನಿಗೆ ವಯಸ್ಸಾಗಿ ರೋಗಿಯಾದುದ್ದಿರಿಂದ ಆತನ ದಿನಗಳು ಮುಗಿಯುತ್ತ ಬಂದಿರುವುದರಿಂದ ಬಹಳ ದಿನಗಳವರೆಗೆ ಆಳ್ವಿಕೆ ಮಾಡಲಾಗಲಿಲ್ಲ.



2



ಒಂದು ದಿನ ದಾವೀದನ ಮತ್ತೊಬ್ಬ ಮಗನಾಗಿರುವ ಆದೋನಿಯು ನಾನು ರಾಜನಾಗುತ್ತೇನೆಂದು ಇಸ್ರೆಯೇಲರಿಗೆ ತಿಳಿಸಿದನು. ಆತನ ಹೆಸರಿನ ಅರ್ಥವೆ “ನನ್ನ ಕರ್ತನು ದೇವರೆಂದು” ಆದೋನಿಯು ಒಳ್ಳೆಯ ಮನುಷ್ಯನಾಗಿರಲಿಲ್ಲ.

3



ಆತನು ಸಿಂಹಾಸನವನ್ನು ಕದಿಯಲು ಪ್ರಯತ್ನಿಸುತ್ತಿದ್ದನು. ದಾವೀದನು ಬಲಹೀನನಾದುದ್ದರಿಂದ ಆತನನ್ನು ತಡೆಯಲು ಆಗಲಿಲ್ಲ ಆದುದ್ದರಿಂದ ದೇವರು ಬೇರೆ ವಿಧವಾದ ಯೋಜನೆಯನ್ನು ಮಾಡಿದನು.

4

ಸೊಲೊಮೋನನ ತಾಯಿಯು ಈತನೇ ರಾಜನಾಗಬೇಕೆಂದು ಬಯಸಿದ್ದರಿಂದ, ಅದೋನಿಯ ಎಲ್ಲಾ ಯೋಜನೆಯನ್ನು ದಾವೀದನಿಗೆ ತಿಳಿಸಿದಳು. ಆತನು ರೋಗಿಯಾಗಿದ್ದಾಗಲೂ ಎಲ್ಲಾ ನಾಯಕರನ್ನು ಕರೆದು ಸಾರ್ವಜನಿಕವಾಗಿ ಸೊಲೊಮೋನನನ್ನು ಇಸ್ರಾಯೇಲ್ಯರ ರಾಜನನ್ನಾಗಿ ಮಾಡಿದನು.



5

ಅದೋನಿಯಿಂದ ಸೊಲೊಮೋನನಿಗೆ ಯಾವುದೆ ತೊಂದರೆ ಆಗಲಿಲ್ಲ, ಏಕೆಂದರೆ ಇಸ್ರಾಯೇಲ್ಯರು ದಾವೀದನನ್ನು ನಂಬಿದ್ದರು. ದಾವೀದನು ಅವರಿಗೆ, ದೇವರು ಸೊಲೊಮೋನನನ್ನೆ ಅರಸನನ್ನಾಗಿ ಆರಿಸಿಕೊಂಡಿದ್ದಾನೆಂದು ಹೇಳಿದ ನಂತರ ಪ್ರಾಣ ಬಿಟ್ಟನು.



6



ದಾವೀದನು ಸಾಯುವ ಮೊದಲು ಸೊಲೊಮೋನನಿಗೆ ನೀನು ಎಲ್ಲಾ ವಿಷಯದಲ್ಲಿ ದೇವರಿಗೆ ವಿದೇಯನಾಗಿದ್ದು ಆತನ ಮಾತನ್ನು ಅನುಸರಿಸಿ ನಡೆದರೆ ನೀನು ಮಾಡುವಂತ ಎಲ್ಲಾ ಕಾರ್ಯದಲ್ಲಿ ಅಬಿವೃದ್ಧಿಯನ್ನು ಕಾಣುವವನಾಗಿರುತ್ತೀಯ ಎಂದನು. ಹೀಗೆ ದಾವೀದನು ಆತನಿಗೆ ಸಲಹೆಯನ್ನು ಕೊಟ್ಟನು. ಸೊಲೊಮೋನನು ದಾವೀದನ ಬದಲಿಗೆ ಸಿಂಹಾಸನದ ಉತ್ತರಾದಿಕಾರಿಯಾಗಿ ತನ್ನ ರಾಜ್ಯವನ್ನು ಸ್ಥಿರಪಡಿಸಿಕೊಂಡನು.

7

ಒಂದು ದಿನ ದೇವರು ಸೊಲೊಮೋನನಿಗೆ ದರ್ಶನವನ್ನು ಕೊಟ್ಟು ನಿನಗೇನು ಬೇಕು ಕೇಳಿಕೋ? ಎಂದು ಹೇಳಿದನು. ದೇವರು ನಿನ್ನನ್ನು ಕೇಳಿಕೊಳ್ಳಲು ಹೇಳಿದರೆ ನೀನು ಏನನ್ನು ಕೇಳಿಕೊಳ್ಳಲು ಬಯಸುತ್ತೀಯ?



8


ಆ ಯೌವನಸ್ಥನಾದ ಸೊಲೊಮೋನನು
ದೇವರಿಂದ ಜ್ಞಾನವನ್ನು ಕೇಳಿಕೊಂಡನು
ಆತನು ಕೇಳಿದಂತ ವಿಷಯವು
ದೇವರಿಗೆ ಮೆಚ್ಚಿಕೆಯಾಯಿತು.
ಅದುದ್ದರಿಂದ ದೇವರು
ಅವನು ಕೇಳಿದ್ದನ್ನು
ಕೊಟ್ಟದ್ದಲ್ಲದೆ,
ಆತನಿಗೆ ಗೌರವ
ಮತ್ತು
ಐಶ್ವರ್ಯವನ್ನು
ಕೊಟ್ಟನು.
9
ಸೊಲೊಮೋನನಲ್ಲಿರುವ ಜ್ಞಾನವನ್ನು
ತಿಳಿದುಕೊಳ್ಳುವುದಕ್ಕೆ ಬಹಳ ದಿನಗಳು
ಹಿಡಿಯಲಿಲ್ಲ, ಒಂದು ಮಗುವನ್ನು
ತಗೆದುಕೊಂಡು ಎರಡು ತಾಯಂದಿರು
ಆತನ ಬಳಿಗೆ ಬಂದರು, ಅವರಲ್ಲಿ
ಒಬ್ಬಳ ಮಗುವು ಸತ್ತು ಹೋಗಿತ್ತು,
ಬದಿಕಿರುವ ಒಂದು ಮಗುವನ್ನು
ತಂದು ಇದು ನನ್ನದು ನನ್ನದು
ಎಂದು ಆ ತಾಯಂದಿರು ಜಗಳ
ಮಾಡಿಕೊಳ್ಳುತ್ತಿದ್ದರು. ಆದರೆ ರಾಜನು,
ಬದುಕಿರುವ ಮಗುವಿನ ನಿಜವಾದ
ತಾಯಿ ಯಾರದೆಂದು ಅರಸನು
ಹೇಗೆ ತೀರ್ಮಾನಿಸಿದನು?
10
ರಾಜನು ನನಗೊಂದು ಕತ್ತಿಯನ್ನು ಕೊಡಿರಿ ಎಂದನು, ಅವರು ಒಂದು
ಕತ್ತಿಯನ್ನು ಕೊಟ್ಟರು ಆದರೆ ರಾಜನು ಆ ಕತ್ತಿಯಿಂದ ಏನನ್ನು ಮಾಡಬಹುದು?
11
ಆಗ ರಾಜನು ಆ ಮಗುವನ್ನು ಕತ್ತರಿಸಿ ಇಬ್ಬರಿಗೂ ಅರ್ದ ಅರ್ದಬಾಗವನ್ನು
ಕೊಡಿರಿ ಎಂದನು. ಕೂಡಲೆ ಇದನ್ನು ಕೇಳಿದ ಆ ಮಗುವಿನ ನಿಜವಾದ
ತಾಯಿಯು ಅದನ್ನು ಕೊಲ್ಲುವುದಕ್ಕಿಂತ ಅವಳಿಗೆ ಕೊಡಿರಿ ಎಂದಳು.
12
ಆದರೆ ಮತ್ತೊಬ್ಬಳು ಪರವಾಗಿಲ್ಲ
ಬಾಗ ಮಾಡಿರಿ ಎಂದಳು.
13
ಅದನ್ನು ಕೇಳಿದ ರಾಜನು ಆ
ಮಗುವನ್ನು ಅವಳಿಗೆ ಕೊಡಿರಿ
ಅವಳೇ ಆ ಮಗುವಿನ ನಿಜವಾದ
ತಾಯಿ ಎಂದನು. ಇದನ್ನು ಕೇಳಿದ
ಜನರು ಆತನಿಗೆ ಮಹತ್ತಾದ
ಗೌರವವನ್ನು ಸಲ್ಲಿಸಿ ಇದು
ದೇವರಿಂದ ಬಂದ ಜ್ಞಾನವೇ
ಅಂದರು.
14


ಇಸ್ರೇಯೇಲರಿಗೆ ದೇವರನ್ನು ಆರಾದಿಸುವುದಕ್ಕೆ ಒಂದು ದೇವಾಲಯ ಇರಲಿಲ್ಲ. ಆದರೆ ದಾವೀದನು ಅದನ್ನು ಕಟ್ಟಬೇಕೆಂದು ಬಯಸಿದ್ದನು, ಆದರೆ ದೇವರು ಆತನಿಗೆ ನೀನು ಅದನ್ನು ಮಾಡುವುದುಬೇಡ.
15
ನಿನ್ನಿಂದ ಹುಟ್ಟುವಂತ ಮಗನು ಅದನ್ನು ಕಟ್ಟುವನು ಎಂದನು. ಆತನ ಮಗನಾದ ಸೊಲೊಮೋನನು ಯೇರುಸಲೇಮ್‌ನಲ್ಲಿ ಒಂದು ಸುಂದರವಾದ ದೇವಾಲಯವನ್ನು ಕಟ್ಟಿದನು.
16
ಅದನ್ನು ಕಟ್ಟುವುದಕ್ಕೆ ಸಮಾರು ಏಳು ವರ್ಷ ಆಯಿತು, ಆ ದೇವಾಲದ ಪ್ರತಿಷ್ಠಾಪನೆ ಸಮಯದಲ್ಲಿ ಸೊಲೊಮೋನನ ಮಾತನ್ನು ಕೇಳುವುದಕ್ಕೆ ಎಲ್ಲರು ಕೂಡಿ ಬಂದರು.
17
ಆಗ ಸಾವಿರಾರು ಯಜ್ಞ ನೈವಿದ್ಯಗಳು ನಡೆದವು ಪ್ರಾರ್ಥನೆಯು ಮುಗಿದ ನಂತರ ಎರಡು ವಾರಗಳ ತನಕ ಬೋಜನ ಮುಂದುವರೆಯಿತು.
18
ಇದಾದ ನಂತರ ದೇವರು ಪ್ರತ್ಯಕ್ಷನಾಗಿ ಸೊಲೊಮೋನನಿಗೆ ಇಸ್ರೇಯೇಲರು ನನಗೆ ವಿದೇಯರಾಗುವವರೆಗೂ ನಾನು ಅವರನ್ನು ಆಶೀರ್ವಾದಿಸುತ್ತೇನೆಂದು ದೇವರು ವಾಗ್ದಾನ ಮಾಡಿದರು.
19
ಸೊಲೊಮೋನನು, ಇಸ್ರಾಯೆಲ್ಯರು ದೇವರಿಗೆ ಅವಿದೇಯರಾದರು. ಆದರೆ ದುಖ:ಕರವಾದ ಸಂಗತಿ ಏನೆಂದರೆ ದೇವರು ಯಾರನ್ನು ಮದುವೆಯಾಗಬಾರದು ಎಂದು ಹೇಳಿದನೋ ಅವರನ್ನೇ ಸೊಲೊಮೋನನು ಮದುವೆಯಾದನು.
20













ಸೊಲೊಮೋನನು ಜ್ಞಾನಿಯಾದ ಅರಸನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**1 ಅರಸು 1–12**

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
**ಕೀರ್ತನೆ 119:130**

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ  ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.